# ಹಿರಿಯ ಸಿವಿಲ್ ನ್ಯಾಯಾಲಯ, ಚಿತ್ತಾಪೂರ

ಅಸಲು ದಾವಾ ನಂಃ 19/2015
ಪಿ.ಡಬ್ಲ್ಯೂ.ನಂಃ 1

ದಿನಾಂಕ 25-02-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.
ಪಾಟಿ ಸವಾಲು : ಶ್ರೀ ಜಿ.ಜಿ.ಕೆ ವಕೀಲರಿಂದ.

ದಾವಾ ಸ್ವತ್ತು ಸರ್ವೆ ನಂಬರ ಮತ್ತು ವಿಸ್ತಿರ್ಣ ಕೆಲವು ಆಸ್ತಿಗಳ ಬಗ್ಗೆ ಹೇಳಬಲ್ಲೆ. ದಾವಾ ಐಟಂ 1 ನೇ ಸ್ವತ್ತಿನಲ್ಲಿ ಸರ್ವೆ ನಂಬರ 111/1 , 6 ಎಕರೆ ಇದ್ದು ಗುಂಟೆ ಬಗ್ಗೆ ಸ್ಪಷ್ಟವಾಗಿ ಗೊತ್ತಿಲ್ಲ. ಸಾಕ್ಷಿಯು ಸ್ವತಃ ಹೇಳುತ್ತಾರೆ ಎಲ್ಲಾ ದಾಖಲೆಗಳು ಹಾಜರು ಮಾಡಿದ್ದೇನೆ. ಈ ಜಮೀನಿನ ಚೆಕ್ಕ ಬಂದಿ ಗೊತ್ತಿಲ್ಲ. ದಾವಾ ಜಮೀನಗಳು ಸ್ವಂತ ಸ್ವಾಧೀನದಲ್ಲಿ ಇದ್ದು ಸಾಗುವಳಿಯನ್ನು ಮಾಡುತ್ತೇನೆ . ನಾನು ಧಾರವಾಡದಿಂದ ಊರಿಗೆ ಬಂದು ಸಾಗುವಳಿ ಮಾಡುತಿಲ್ಲ ಆದರೆ ನನ್ನ ಪರವಾಗಿ ನನ್ನ ಮಾವ 1 ನೇ ಪ್ರತಿವಾದಿ ಸಾಗುವಳಿ ಮಾಡುತ್ತಿದ್ದಾರೆ. ದಾವೆಯ ಎಲ್ಲಾ ಜಮೀನುಗಳು ಒಟ್ಟು ವಿಸ್ತಿರ್ಣ 36 ಎಕರೆ 10 ಗುಂಟೆ ಇದೆ. ದಾವಾ ಹಾಕುವ ಮುಂಚೆ 2013 ರವರಗೆ ನಾನು ಗುಲಬರ್ಗಾದಲ್ಲಿ ಇದ್ದೆ. ದಾವಾ ಜಮೀನುಗಳಿಗೆ ಬಿತ್ತಲು ಎಷ್ಟು ಬೀಜ ಮತ್ತು ಗೊಬ್ಬರ ಹೋಗುತ್ತದೆ ಬೇಕಾಗುತ್ತದೆ ಎಂದು ಗೊತ್ತಿಲ್ಲ. ಎಕೆಂದರೆ ನಾನು ಸಾಗುವಳಿ ಮಾಡಿಲ್ಲ. ಸಮಸ್ತ ಆಸ್ತಿಗಳಿಂದ ಎಷ್ಟು ಆದಾಯ ಬರುತ್ತಿತ್ತು ಮತ್ತು ಎಷ್ಟು ಖರ್ಚು ಆಗುತ್ತಿತ್ತು ಕೇಳಿದ ಪ್ರಶ್ನೆಗೆ ಸಾಕ್ಷಿ ಮಾವನಿಗೆ ಗೊತ್ತು ಎಂದು ಹೇಳುತ್ತಾರೆ. ದಾವಾ ಸ್ವತ್ತು ಗಳಿಂದ ಎಷ್ಟು ಆದಾಯ ಬರುತ್ತಿದೆ ಮತ್ತು ಏನೆಲ್ಲಾ ಖರ್ಚು ಆಗುತಿದ್ದೆ ಎಂದು ಮಾವನಿಗೆ ನಾನು ಲೆಕ್ಕ ಪತ್ರ ಕೇಳಿಲ್ಲ.

ನನ್ನ ಮಾವ ಸೇರಿ ಅವರು ಮೂರು ಜನ ಸಹೋದರರು. ನನ್ನ ಮಾವನ ಸಹೋದರರ ಹೆಸರು ಭೀಮಶಂಕರ ಮತ್ತು ಶಾಂತ ಮಲ್ಲಪ್ಪ. ನನ್ನ ಮಾವ ಅವರ ಸಹೋದರರ ಜೋತೆ ಪಿತ್ರಾರ್ಜಿತ ಆಸ್ತಿಗಳನ್ನು ಇತ್ತಿಚಿಗೆ ಅಂದರೆ 2 ವರ್ಷಗಳ ಹಿಂದೆ ಪಾಲು ಮಾಡಿಕೊಂಡಿದ್ದಾರೆ. ಆ ಎರಡು ವರ್ಷಗಳ ಹಿಂದೆ ಆಗಿರುವ ಪಾಲಿನಲ್ಲಿ ಯಾರ ಯಾರ ಪಾಲಿಗೆ ಎಷ್ಟು ಜಮೀನು ಹೊಗಿದೆ ಎಂದು ದಾಖಲೆಗಳು ಕೊಟ್ಟಿದ್ದೇನೆ. ದಾವೆಯ ಎಲ್ಲಾ ಆಸ್ತಿಗಳು ನನ್ನ ಮಾವನಿಗೆ ಮಾತ್ರ ಸೇರಿರುತ್ತದೆ. ಅವರ ಸಹೋದರರಿಗೆ ಸೇರಿಲ್ಲ. ಸರ್ವೆ ನಂಬರ 153 , 16 ಎಕರೆ 22 ಗುಂಟೆ ಪೈಕಿ 14 ಎಕರೆ 37 ಗುಂಟೆ ಯು.ಕೆ. ಬಿ ಅಡಿಯಲ್ಲಿ ಸರ್ಕಾರಕ್ಕೆ ಭೂ ಸ್ವಾಧೀನವಾಗಿದ್ದರ ಬಗ್ಗೆ ದಾಖಲೆ ಹಾಜರು ಮಾಡಿದ್ದೇನೆ. ದಾವಾ ಸರ್ವೆ ನಂಬರ 153 ನನ್ನ ಮಾವ ಅಥವಾ ಯಾವುದೇ ಪ್ರತಿವಾದಿಯರ ಹಸರಿನಲ್ಲಿ ಇಲ್ಲ ಅಂದರೆ ಮೊದಲು ಇತ್ತು ಎಂದು ಹೇಳಿ ಮೊದಲು ನನ್ನ ಗಂಡ ಮತ್ತು ಬಾವನ ಹೆಸರಿನಲ್ಲಿ ಇತ್ತು ನಂತರ ಪಾಲು ಮಾಡಿಕೊಂಡು ತನ್ನ ಹೆಸರಿಗೆ ಮಾಡಿಕೊಂಡಿದ್ದಾರೆ. ಈ ಜಮೀನು ಮೊದಲು ಶಾಂತಮಲ್ಲಪ್ಪ ಅಂದರೆ 1 ನೇ ಪ್ರತಿವಾದಿಯ ಸಹೋದರನ ಹೆಸರಿನಲ್ಲಿ ಇತ್ತು ಹಾಗಾಗಿ ಪರಿಹಾರ ಆದೇಶವು ಅವರ ಹೆಸರಿನಲ್ಲಿ ಇದೆ ಅನ್ನುವುದು ಸರಿಯಲ್ಲ. ಸರ್ವೆ ನಂಬರ 79, 4 ಎಕರೆ 39 ಗುಂಟೆ ಈ ಜಮೀನು ಯಲಪ್ಪನಿಂದ ನನ್ನ ಮಾವ ಸ್ವಂತ ಖರೀದಿಸಿದ್ದಾನೆ ಅನ್ನುವುದು ಸುಳ್ಳು.

ನನ್ನ ಮಾವ ಗುಲಬರ್ಗಾ ವಿಶ್ವ ವಿದ್ಯಾಲಯದಲ್ಲಿ ಎಚ್ ಓ ಡಿ ಯಾಗಿ ಕೆಲಸ ಮಾಡಿದ್ದಾರೆ. ನನ್ನ ಮಾವ ಒಟ್ಟು ಎಷ್ಟು ವರ್ಷ ಆ ಸೇವೆಯಲ್ಲಿ ಇದ್ದರು ಗೊತ್ತಿಲ್ಲ. ಒಟ್ಟಿನಲ್ಲಿ ನನ್ನ ಮದುವೆಯಾಗಿ ಒಂದು ವರ್ಷಕ್ಕೆ ನಿವೃತ್ತಿಯಾಗಿದ್ದಾರೆ. ನನ್ನ ಮಾವ ಆಗಸ್ಟ 1976 ರಿಂದ ಎಪ್ರಿಲ್ 2004 ರವರಗೆ ಸರ್ಕಾರಿ ಸೇವೆಯಲ್ಲಿ ಇದ್ದರು ನನಗೆ ಗೊತ್ತಿಲ್ಲ, ನನ್ನ ಮಾವನವರ ಒಟ್ಟು ಸಂಬಳ ಎಷ್ಟು ಇತ್ತು ಮತ್ತು ಎಷ್ಟು ಆದಾಯ ತೇರಿಗೆ ಪಾವತಿ ಮಾಡುತಿದ್ದರು ಎಂದು ವಿವರ ಗೊತ್ತಿಲ್ಲ. ದಾವಾ ಸರ್ವೆ ನಂಬರ 111/1, 5 ಎಕರೆ 28 ಗುಂಟೆ ಮೊದಲು ಭೀಮಶಂಕರ ಹೆಸರಿನಲ್ಲಿ ಇತ್ತು ಅವರು 3 ನೇ ವ್ಯಕ್ತಿಗೆ ಮಾರಿದ್ದರೆ ಅನ್ನುವುದು ಗೊತ್ತಿಲ್ಲ. ಸಾಕ್ಷಿಯು

ಪಾಲು ಆದ ನಂತರ ದಾಖಲೆ ಪಡೆದಿದ್ದೇನೆ. ಆ 3 ನೇ ವ್ಯಕ್ತಿಯ ಸದರಿ ಜಮೀನು ಮಾಹನಂದಾ ಖರೀದಿ ಮಾಡಿದ್ದಾನೆ ಅನ್ನುವುದು ಸುಳ್ಳು. ಸದರಿ ಮಾಹನಂದನಿಂದ ನನ್ನ ಮಾವನಿಗೆ ಬಂದಿದ್ದು ಆ ಜಮೀನು ಹಿರಿಯರ ಆಸ್ತಿ ಅಲ್ಲ ಅನ್ನುವುದು ಸುಳ್ಳು. ಅದೇ ರೀತಿ ದಾವಾ ಸರ್ವೆ ನಂಬರ 111/3 , 6 ಎಕರೆ 38 ಗುಂಟೆ ಜಮೀನು ಮೊದಲು ಶಾಂತಮಲ್ಲಪ್ಪನ ಹೆಸರಿನಲ್ಲಿ ಇತ್ತು ರಿಸೆಟಲ್‌ಮೆಂಟ್ ನಲ್ಲಿ ನನ್ನ ಮಾವನ ಪಾಲಿಗೆ ಬಂದಿದೆ ಅನ್ನುವುದು ಸುಳ್ಳು. ಹಾಗಾಗಿ ಈ ಜಮೀನು ಸಹ ಪಿತ್ರಾರ್ಜಿತ ಸ್ವತ್ತು ಅನ್ನುವುದು ಸುಳ್ಳು. ದಾವಾ ಸರ್ವೆ ನಂಬರ 118, 6 ಎಕರೆ 6 ಗುಂಟೆ ಈ ಜಮೀನು ಸಹ ನನ್ನ ಮಾವ ಶಾಂತಮಲ್ಲಪ್ಪನಿಂದ ಮೌಖಿಕವಾಗಿ ಖರೀದಿಮಾಡಿದ್ದಾರೆ ಅನ್ನುವುದು ಸುಳ್ಳು. ಕೇವಲ ದಾವಾ ಸರ್ವೆ ನಂಬರ 123/3 , 35 ಗುಂಟೆ ಸರ್ವೆ ನಂಬರ 123/4 , 7 ಎಕರೆ 36 ಗುಂಟೆ ಈ ಎರಡೇ ಜಮೀನು ಪಿತ್ರಾರ್ಜಿತ ಸ್ವತ್ತು ಅನ್ನುವುದು ಸರಿಯಲ್ಲ.

ಸರ್ವೆ ನಂಬರ 142/4 /3 , 28 ಗುಂಟೆ ಇದರಲ್ಲಿ ಶಾಂತಮಲ್ಲಣ್ಣ ಅನ್ಯಸಂಕ್ರಮಣ ಮಾಡಿ ನಿವೇಶನಗಳನ್ನು ಮಾಡಿರುವ ವಿಷಯ ಗೊತ್ತಿಲ್ಲ. ಆ ಎಲ್ಲಾ ನಿವೇಶನಗಳು ಶಾಂತಮಲ್ಲಣ್ಣ ಮಾರಾಟ ಮಾಡಿದ್ದು ಸದರಿ ಜಮೀನು ಅಸ್ತಿತ್ವದಲ್ಲಿ ಇಲ್ಲ ಅನ್ನುವುದು ಸುಳ್ಳು. ಇತ್ತಿಚಿಗೆ ಒಂದು ವರ್ಷದ ಹಿಂದೆ ಶಾಂತಮಲ್ಲಣ್ಣ ಆ ಜಮೀನಿನಲ್ಲಿ ನಿವೇಶನ ಮಾಡಿದ್ದು ಗೊತ್ತಾಯಿತು. ಸರ್ವೆ ನಂಬರ 155 , 2 ಎಕರೆ 25 ಗುಂಟೆ ಇದು ಮೊದಲಿನಿಂದಲೂ ಶಾಂತಮಲ್ಲಣನಿಗೆ ಸೇರಿದ ಜಮೀನು ನನ್ನ ಮಾವನಿಗೆ ಸೇರಿದ್ದು ಅಲ್ಲ ಅನ್ನುವುದು ಸರಿಯಲ್ಲ.

**ಈ ಹಂತದಲ್ಲಿ ಬೋರ್ಡ ಮೇಲೆ ಹಳೆಯ ಬೇರೆ ಪ್ರಕರಣಗಳು ಇದಿದ್ದರಿಂದ ಮತ್ತು ಸಮಯದ ಅಭಾವದಿಂದ ಪಾಟಿ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**